ಸದರೀ ದರಖಾಸ್ತುದಾರರಾದ 1ನೇ ಚನ್ನಬಸವ್ಯ, 2ನೇ ರುದ್ರವ್ವನ ಅರ್ಜ್ಜೀಯನ್ನು 1884ನೇ ಇಸವೀ ಅಕ್ಟೋಬರ್ ತಿಂಗಳು ತಾರೀಖು 9ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಘಟ್ಟ ರುದ್ರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಸೆಪ್ಟೆಂಬರ್ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್ ಜಡ್ಜ್.

ನಗರ ಡಿವೀರ್ಜ್.

ನಗರ ಡಿಸ್ಟ್ರಿಕ್ಟು ಜಡ್ಜ್ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 74.

ಮೃತಪಟ್ಟ ನಗರದ ತಾಲ್ಲೂಕು ಆರನಾಡು ಮೊಗಣಿ ಶಾನಭೋಗ ಮರಿಯಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹೋತನಕಟ್ಟೆ ಸೇತುಮಾಧವಾಚಾರ್ಯ, ಮೃತಪಟ್ಟ ಸದರೀ ಮರಿಯಪ್ಪನ ದತ್ತುಮಗ ಮೈನರ್ ಗುಂಡನಿಗೆ ಜನಕ ತಂದೆ ಆಗಬೇಕೆಂಬ ಹಕ್ಕುದಾರೀಮೇಲೆ ತೀರ್ಥಹಳ್ಳಿ ಕಸಬಾ ಸ್ಥಳದ ಸೇತುಮಾಧವಾಚಾರ್ಯನು ನಗರ ತಾಲ್ಲೂಕು ಆರನಾಡು ಮೊಗಣಿ ಪತ್ತೆಪೇಟೆ ವಾಸಸ್ಥನಾಗಿ ಮೃತಪಟ್ಟ ಶಾನಭೋಗ ಮರಿಯಪ್ಪನ ಜೊಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ಮೈನರ್ ಗುಂಡನಿಗೋಸ್ಕರ ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸೇತುಮಾಧವಾಚಾರ್ಯನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾನಭೋಗ ಮರಿಯಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1884ನೇ ಇಸವಿ ಅರ್ಜೀ ನಂಬರ್ 75.

ಮೃತಪಟ್ಟ ವೀರಪ್ಪಗವುಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕಿದ್ದವೀರಪ್ಪ, ಮೃತಪಟ್ಟ ಸದರೀ ವೀರಪ್ಪಗವುಡನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಸಾಗರ ತಾಲ್ಲೂಕು ಆವಿನಹಳ್ಳಿ ಮೊಗಣಿ ತೋಟದ ಕೊಪ್ಪದ ಸ್ಥಳದ ಕಿದ್ದವೀರಪ್ಪನು ಸದರೀ ತೋಟದ ಕೊಪ್ಪದ ಗ್ರಾಮದ ವಾಸಸ್ಥನಾಗಿ ಮೃತಪಟ್ಟ ವೀರಪ್ಪಗವುಡನ ಜೊಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿಗಳ ಸಾಲಗಳನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕಿದ್ದವೀರಪ್ಪನ ಅರ್ಜೀಯನ್ನು, 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೀರಪ್ಪಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಸೆಪ್ಟೆಂಬರ್ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಗೈರ್ ವಿಲಾ.

ಕರೆನ್ಸೀ ನೋಟಿನ ಅರ್ಧ ತುಕಡೆ.

ನಂಬರ್.	ಸರ್ಕಲ್.	ಮೊಬಲಗು.	ಹಕ್ಕುದಾರ—ಚಿಕ್ಕಮಗಳೂರು ತಾಲ್ಲೂಕು
58387	ಮದರಾಸ್	ರೂ. 50	ವಗರು ಬಂಗ್ಲೆ ರೈಟರ್ ನಾರಣಪ್ಪ. ಪತ್ತೇಮಾಡಿ ಕೊಟ್ಟವರಿಗೆ 10 ರೂಪಾಯಿ ಇನಾಂ ಕೊಡುವದಾಗಿ ಹೇಳುತ್ತಾನೆ.